**‘ಈಶಾನ್ಯ ಭಾರತದ ಸ್ಪರ್ಧಿಗಳು’ ಎಂದರೆ ಅಲ್ಲಿನವರಿಗೆ ಬೇಸರ. ‘ಭಾರತದವರೆನ್ನಿ... ಹೆಮ್ಮೆಯೆನಿಸುತ್ತದೆ’ ಎನ್ನುತ್ತಾರವರು. ಮೀರಾಬಾಯಿ ಚಾನು ಹಾಗೂ ಲವ್ಲಿನಾ ಭಾರತಕ್ಕೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಒಂದೇ ವಾರದಲ್ಲಿ ಎರಡು ಪದಕಗಳನ್ನು ಗೆದ್ದುಕೊಟ್ಟರು. ಪದಕ ಗೆಲ್ಲದೆ ಹೋದರೂ ಮೇರಿ ಕೋಮ್ ತಮ್ಮ ವಿಶ್ವದರ್ಜೆಯನ್ನು ಸಾಬೀತುಪಡಿಸಿದರು. ಈಶಾನ್ಯ ಭಾರತದಲ್ಲಿ ಈ ಕ್ರೀಡಾ ಸಂಸ್ಕೃತಿ ಮೂಡಿದ್ದಾದರೂ ಹೇಗೆ?**



ಮೀರಾಬಾಯಿ ಚಾನು

ಬಾಕ್ಸಿಂಗ್ ವರಸೆಗಳಲ್ಲಿ ಪಳಗಲು ಹೆಚ್ಚು ಸಮಯ ವಿನಿಯೋಗಿಸುತ್ತಿದ್ದಾಗ ಲವ್ಲಿನಾ ತಮ್ಮ ಅಮ್ಮನ ಮೂತ್ರಕೋಶದ ಸಮಸ್ಯೆಯ ಕುರಿತು ತಲೆಕೆಡಿಸಿಕೊಂಡಿದ್ದರು. ಆಸ್ಪತ್ರೆಯ ಹಾಸಿಗೆ ಮೇಲೆ ಮಲಗಿದ್ದ ಅಮ್ಮನ ಆರೈಕೆ ಮಾಡುತ್ತಿದ್ದರು. ಅಮ್ಮ ಚಿಕಿತ್ಸೆಯ ನಂತರ ಡಿಸ್‌ಚಾರ್ಜ್ ಆಗಿ ಮನೆಗೇನೋ ಬಂದರು. ಆಗ ಭತ್ತದ ಗದ್ದೆಯಲ್ಲಿ ಅಪ್ಪನಿಗೆ ಸಾಥ್ ನೀಡಬೇಕಾದ ಉಸಾಬರಿಯೂ ಇತ್ತು. ಲವ್ಲಿನಾ ಎಲ್ಲವನ್ನೂ ಜೀವಿಸಿದರು. ಅವರ ಬದುಕಿನ ಪ್ರೀತಿಗೆ ಹಿಡಿದ ಕನ್ನಡಿ ಇದು. ಇಂತಹ ಮಹತ್ವಾಕಾಂಕ್ಷಿಗೆ ಎದುರಾದ ಸವಾಲುಗಳು ಇಲ್ಲಿಗೇ ಕೊನೆಯಾಗಲಿಲ್ಲ. ಹೆಚ್ಚುವರಿ ತರಬೇತಿಯ ಜತೆಗೆ ಒಲಿಂಪಿಕ್ಸ್ ಸಿದ್ಧತೆಗೆಂದೇ ಕೆಲವು ಸ್ಪರ್ಧೆಗಳಲ್ಲಿ ಭಾಗವಹಿಸಲು ಇಟಲಿಗೆ ತೆರಳಬೇಕಿತ್ತು. ಅದೇ ಹೊತ್ತಿಗೆ ಕೋವಿಡ್–19 ತಪಾಸಣೆಯಲ್ಲಿ ‘ಪಾಸಿಟಿವ್’ ಎಂದು ಬಂದಿತು. ಸಿನಿಮೀಯ ಎನ್ನಿಸಿದರೂ ಎದೆಗೊಡಲೇಬೇಕಾದ ಕಟು ವಾಸ್ತವದ ಇಂತಹ ಅಡೆತಡೆಗಳನ್ನೆಲ್ಲ ದಾಟಿದ ಲವ್ಲಿನಾ ಬಾಕ್ಸಿಂಗ್ ರಿಂಗ್‌ನಲ್ಲಿ ಸೋಲಿಸಿದ್ದು ಆತ್ಮವಿಶ್ವಾಸದ ಖನಿಯಂತೆ ಕಾಣುತ್ತಿದ್ದ ತೈವಾನ್‌ನ ಹುಡುಗಿಯನ್ನು.

ಮೀರಾಬಾಯಿ ಚಾನುವಿನ ಬದುಕಿನ ಅನುಭವ ಅನೇಕರ ಬಾಯಿಯಲ್ಲೀಗ ಹರಿದಾಡಿದೆ. ಕಾಡಿಗೆ ಕಟ್ಟಿಗೆ ತರಲು ಹೋಗುತ್ತಿದ್ದ ದಿನಗಳನ್ನು ಅವರ ಸಹೋದರ ನೆನಪಿಸಿಕೊಂಡಿದ್ದನ್ನು ರೂಪಕವಾಗಿ ನೋಡಬೇಕು. ಆಗ ಮನೆಮಂದಿಯೆಲ್ಲ ಕಾಡಿಗೆ ಕಟ್ಟಿಗೆ ತರಲು ಹೋಗುವುದು ಅನಿವಾರ್ಯವಿತ್ತು. ಎಲ್ಲರಿಗಿಂತ ಹೆಚ್ಚು ಕಟ್ಟಿಗೆಗಳ ಹೊರೆಯನ್ನು ಮೀರಾಬಾಯಿ ಹೊರುತ್ತಿದ್ದರು. ಶಿರದ ಮೇಲೆ ಮಣಭಾರವಿದ್ದೂ ಸಹೋದರಿಯ ಕಣ್ಣುಗಳಲ್ಲಿನ ಹೊಳಪು ಪದಕದ ಭೂಮಿಕೆಯ ಮಿಂಚಿನಂತೆ ಆ ಸಹೋದರನಿಗೆ ಈಗ ಕಾಣುತ್ತಿರುವುದರಲ್ಲಿ ಅರ್ಥವಿದೆ.

ಈಶಾನ್ಯ ಭಾರತದ ಕ್ರೀಡಾಪಟುಗಳಲ್ಲೇ ಯಾಕೆ ಇಂತಹ ಮಹತ್ವಾಕಾಂಕ್ಷೆ ಇರುತ್ತದೆ ಎನ್ನುವ ಕುರಿತು ಹಲವು ಅಭಿಪ್ರಾಯಗಳು ಮೂಡತೊಡಗಿವೆ. ಇದನ್ನು ಅಲ್ಲಿನ ಕ್ರೀಡಾಪಟುಗಳು ಬೇಸರದ ದೃಷ್ಟಿಯಲ್ಲೇ ಸ್ವೀಕರಿಸುತ್ತಿದ್ದಾರೆ. ‘ನಮ್ಮದೇ ದೇಶದವರು’ ಎಂದು ಕರೆಸಿಕೊಳ್ಳುವ ಹೆಬ್ಬಯಕೆ ಗೆದ್ದವರಲ್ಲಿ, ಗೆಲ್ಲಬೇಕೆಂದುಕೊಂಡವರಲ್ಲಿ ಇದೆಯೇ ವಿನಾ ‘ಈಶಾನ್ಯ ಭಾರತದವರು’ ಎನಿಸಿಕೊಂಡರೆ ಯಾಕೋ ಸಂಕುಚಿತವಾಗಿಸಿ ನೋಡಿದಂತೆ ಎಂಬ

## ಹಾಕಿ ಯಶೋನಕಾಶೆ; ಒಡಿಶಾ ಕಾಣ್ಕೆ

ಟೋಕಿಯೊ ಒಲಿಂಪಿಕ್ಸ್ ಹಾಕಿಯಲ್ಲಿ ಪುರುಷರ ಹಾಗೂ ಮಹಿಳೆಯರ ತಂಡಗಳೆರಡರ ಸಾಧನೆ ಕಣ್ಣುಕೋರೈಸುವಂಥದ್ದು. ಇದರ ಹಿಂದೆ ಒಡಿಶಾ ರಾಜ್ಯ ಸರ್ಕಾರದ ಕಾಣ್ಕೆ ಇದೆ. 2018ರಲ್ಲಿ ಸಹರಾ ಕಂಪನಿಯು ತಂಡದ ಪ್ರಾಯೋಜಕತ್ವದಿಂದ ಹಿಂದೆ ಸರಿದಾಗ, ಮುಂದಿನ ಜವಾಬ್ದಾರಿ ವಹಿಸಿಕೊಳ್ಳಲು ಮುಂದೆ ಬಂದದ್ದು ಒಡಿಶಾ ಸರ್ಕಾರ. ಹತ್ತು ವರ್ಷಗಳಲ್ಲಿ ದೇಶದ ಹಾಕಿ ತಂಡಗಳ ಬಲವರ್ಧನೆಗೆಂದೇ 150 ಕೋಟಿಯನ್ನು ಮೀಸಲಿಟ್ಟಿತು. 2014ರಲ್ಲಿ ಚಾಂಪಿಯನ್ಸ್ ಟ್ರೋಫಿ, 2017ರಲ್ಲಿ ವಿಶ್ವ ಲೀಗ್ ಫೈನಲ್ ಹಾಗೂ 2018ರಲ್ಲಿ ವಿಶ್ವ ಕಪ್ ಆಯೋಜಿಸಿದ್ದ ರಾಜ್ಯಕ್ಕೆ ಈ ಕ್ರೀಡೆಯ ಮೇಲಿರುವ ಪ್ರೀತಿ ಎಂಥದೆನ್ನುವುದು ಇದರಿಂದಲೇ ಸ್ಪಷ್ಟವಾಗುತ್ತದೆ.

ವಿಶ್ವಕಪ್ ಅನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ರಾಜ್ಯ ಸಚಿವ ಸಂಪುಟವು ಈ ವರ್ಷ ಮಾರ್ಚ್‌ನಲ್ಲಿ ‘ರಾಜ್ಯ ಮಟ್ಟದ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿ ಯೋಜನೆ’ಯನ್ನು ಅನುಮೋದಿಸಿತು. ಭುವನೇಶ್ವರದ ಕಳಿಂಗ ಕ್ರೀಡಾಂಗಣದ ಮೌಲಸೌಕರ್ಯ ಅಭಿವೃದ್ಧಿ ಹಾಗೂ ರೂರ್ಕೆಲಾದಲ್ಲಿ ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣ ನಿರ್ಮಾಣಕ್ಕೆ ಅಂದಾಜು 356.38 ಕೋಟಿ ಬಜೆಟ್ ಒಳಗೊಂಡ ಯೋಜನೆ ಇದು. ರೂರ್ಕೆಲಾದ ಕ್ರೀಡಾಂಗಣ ನಿರ್ಮಾಣವಾದ ಮೇಲೆ 20 ಸಾವಿರ ಪ್ರೇಕ್ಷಕರು ಕೂರುವ ವ್ಯವಸ್ಥೆ ಬರಲಿದೆ. ದೇಶದಲ್ಲೇ ಅತಿ ದೊಡ್ಡ ಹಾಕಿ ಕ್ರೀಡಾಂಗಣ ಇದೆನ್ನಿಸಿಕೊಳ್ಳಲಿದೆ.

ಒಲಿಂಪಿಕ್ಸ್ ಹಾಕಿ ಆಡಿದ ಮಹಿಳಾ ತಂಡದ ಉಪನಾಯಕಿ ದೀಪ್ ಗ್ರೇಸ್ ಎಕ್ಕಾ ಹಾಗೂ ಪುರುಷರ ತಂಡದ ಉಪನಾಯಕ ಬೀರೇಂದ್ರ ಲಾಕಡಾ ಇಬ್ಬರೂ ಒಡಿಶಾದವರೆನ್ನುವುದಕ್ಕೆ ಅಡಿಗೆರೆ ಎಳೆಯಬೇಕು.